# <u>ಹಿರಿಯ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.,ನ್ಯಾಯಾಲಯ, ಅಂಕೋಲಾ.</u>

ಸಿ.ಸಿ. ನಂ.13/2025

ಪಿ.ಡಬ್ಲ್ಯೂಃ 2

ಸಿಡಬ್ಲ್ಯೂ-2

ಸಾಕ್ಷಿದಾರರ ಹೆಸರು : ರವಿರಾಜ ನಾಯ್ಕ

ತಂದೆಯ ಹೆಸರು : ನಿಲಪ್ಪ ನಾಯ್ಕ

ವಯಸ್ಸು : 59 ವರ್ಷ

ಉದ್ಯೋಗ : ಅಬಕಾರಿ ಉಪ ನೀರಿಕ್ಷಕರು , ಹಾವೇರಿ

ವಾಸ : ಹಾವೇರಿ

ದಿನಾಂಕಃ 12-12-2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣಿಕರಿಸಲಾಯಿತು.

**<u>ಮುಖ್ಯ ವಿಚಾರಣೆಃ</u> ಸರಕಾರದ ಪರವಾಗಿ ಸ .ಸ. ಆ ರವರಿಂದ ಃ**

1. ನಾನು ದಿಃ 9-2-2024 ರಿಂದ ದಿಃ21-11-2025 ತನಕ ಅಂಕೋಲಾ ವಲಯದಲ್ಲಿ ನಾನು ಅಬಕಾರಿ ಮುಖ್ಯ ಪೇದೆಯಾಗಿ ಕಾರ್ಯ ನಿರ್ವಹಿಸಿದ್ದೇನೆ .

2. ದಿಃ21-03-2024 ರಂದು ಲೋಕ ಸಭಾ ಚುನಾವಣೆ ನಿಮಿತ್ತ ನಾನು ರಾತ್ರಿ ಪಾಳೆಯ ಗಸ್ತು ಕರ್ತ್ಯವ್ಯ ದಲ್ಲಿ ಇದ್ದೆ . ಆ ದಿನ ನಾನು , ಚಾಸಾ -3 ಮತ್ತು ಚಾಲಕ ವಿನಾಯಕ ನಾಯ್ಕ ರರು ಇಲಾಖಾ ಜೀಪದಲ್ಲಿ ಗಸ್ತು ತಿರುಗುತ್ತಿದ್ದೆವು . ಬೆಳಿಗ್ಗೆ 4-00 ಗಂಟೆ ಸಮಯದಲ್ಲಿ ಅಂಕೋಲಾ ವಲಯದಲ್ಲಿ ಗಸ್ತು ಕಾರ್ಯ ನಿರ್ಹಿಸುತ್ತಿರುವಾಗ ಒಂದು ದೂರವಾಣಿ ಕರೆ ಚಾಸಾ-1 ರವರಿಗೆ ಬಂದಿರುತ್ತದೆ . ಅದರಲ್ಲಿ ಹಳವಳ್ಳಿ ಗ್ರಾಮದ ಅಶೋಕ ಕೃಷ್ಣಾ ನಾಯ್ಕ ಇತನ ಮನೆಯಲ್ಲಿ ಅಕ್ರಮವಾಗಿ ಕರ್ನಾಟಕ ರಾಜ್ಯದಲ್ಲಿರುವ ಸರಾಯಿಯನ್ನು ಸಂಗ್ರಹಿಸಿರುತ್ತಾನೆ ಎಂದು ಮಾಹಿತಿ ಬಂದಿರುತ್ತದೆ . ಕೂಡಲೆ ನಾವು ಅಂದರೆ ನಮ್ಮ ಚಾಲಕನಾದ ವಿನಾಯಕ ನಾಯ್ಕ ಹಾಗೂ ಚಾಸಾ -2 ಮತ್ತು 3 ರವರೊಂದಿಗೆ ಇಲಾಖಾ ಜೀಪ ನಲ್ಲಿ ಹಳವಳ್ಳಿ ಗ್ರಾಮಕ್ಕೆ ಬೆಳಿಗೆ 5-00 ಕ್ಕೆ ಹೋಗಿರುತ್ತೇವೆ . ನಾವು ಆರೋಪಿಯ ಮನೆಯ ಮುಂದೆ ನಿಂತಾಗ ಆ ಮನೆಯ ಮುಂದೆ ನಿಂತಿರುವ ಒಬ್ಬ ವ್ಯಕ್ತಿ ನಮ್ಮನ್ನು ನೋಡಿ ಓಡಿ ಹೋಗಿರುತ್ತಾನೆ . ನಾವುಗಳು ಆತನನ್ನು ಹುಡುಕಾಡಿರುತ್ತೇವೆ. ಆದರೂ

ಅವ್ಯಕ್ತಿ ಸಿಗಲಿಲ್ಲ ಅರಣ್ಯ ಪ್ರದೇಶ ದಲ್ಲಿ ಕತ್ತಲಲ್ಲಿ ಓಡಿ ಹೋಗಿರುತ್ತಾನೆ . ನಂತರ ಚಾಸಾ -1 ರವರು ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಪಂಚರಾಗುವಂತೆ ನನ್ನನ್ನು ಮತ್ತು ಚಾಸಾ -3 ರವರನ್ನು ಕೇಳಿ ಕೊಂಡ ನಂತರ ನಾವು ಪಂಚರಾಗಿ ಸಹಕರಿಸಿದ್ದೇವೆ . ನಂತರ ಆತನ ಮನೆಯ ಒಳಗಡೆ ಹೋಗಬೇಕಾಗಿತ್ತು ಆ ಸಮಯದಲ್ಲಿ ಸಮಯವು ತುಂಬಾ ಕಡಿಮೆ ಇತ್ತು ಆ ಕಾರಣದಿಂದ ಸ್ಥಳದಲ್ಲಿಯೇ ತದನಂತರ ನಾವು ಶೋಧನಾ ಸಮುಚಿತ ವಾರಂಟನ್ನು ಸ್ಥಳದಲ್ಲಿ ತಯಾರಿಸಿ ಕೊಂಡು ನಾವು ಹಾಗೂ ಪಂಚರು ಮನೆಯ ಒಳಗಡೆ ಪ್ರವೇಶ ಮಾಡಿರುತ್ತೇವೆ . ಆ ಮನೆಯ ಲ್ಲಿ ಹುಡುಕಾಡುವಾಗ ಮನೆಯ ಎಡ ಭಾಗದಲ್ಲಿ ಬಿಳಿಯ ಬಣ್ಣದ ಪ್ಲಾಸ್ಟಿಕ ಚೀಲ ಸಿಕ್ಕಿರುತ್ತದೆ . ನಂತರದಲ್ಲಿ ಅವುಗಳನ್ನು ನಮ್ಮ ಗಳ ಸಮಕ್ಷಮ ದಲ್ಲಿ ಪ್ಲಾಸ್ಟಿಕ ಚೀಲವನ್ನು ತೆಗೆದು ನೋಡಲಾಗಿ ಅಲ್ಲಿ ಕರ್ನಾಟಕ ರಾಜ್ಯದಲ್ಲಿ ಮಾತ್ರ ಮಾರಾಟಕ್ಕೆ ಇದ್ದ 90 ಎಮ್ ಎಲ್ ನ 334 ನ ಪೌಚ ಗಳು ಓರಿಜಿನಲ್ ಚಾಯ್ಸು ವಿಸ್ಕಿ ಯ ಪ್ಯಾಕೇಟ ಆಗಿರುತ್ತದೆ ನಂತರ ನಾವು ಅವುಗಳನ್ನು ಇಲಾಖಾ ಪಂಚರ ಸಮಕ್ಷಮ ಪಂಚನಾಮೆ ಮುಖಾಂತರ ಅಮಾನತು ಪಡಿಸಿಕೊಂಡಿರುತ್ತೇವೆ. ಸದ್ರಿ ಪಂಚನಾಮೆ ಬೆಳಿಗ್ಗೆ 5-30 ರಿಂದ 6-45 ರವರೆಗೆ ಬರೆಯ ಲಾಗಿರುತ್ತದೆ . ಸದ್ರಿ ಅಮಾನತು ಪಡಿಸಿಕೊಂಡ ವಸ್ತುಗಳ ಮೇಲೆ ನಮ್ಮಗಳ ಸಹಿ ಪಡೆದುಕೊಂಡು ಅರಗಿನ ಶೀಲುನ್ನು ಹಾಕಿ ಬಿಳಿ ಬಟ್ಟೆ ಸುತ್ತಿ ಅವುಗಳನ್ನು ರಟ್ಟಿನ ಬಾಕ್ಸ ದಲ್ಲಿ ಹಾಕಲಾಗಿರುತ್ತದೆ . ಅವುಗಳಲ್ಲಿ ಪ್ರತ್ಯೇಕವಾಗಿ 24 ಟೆಟ್ರಾ ಪ್ಯಾಕಗಳನ್ನು ರಾಸಾಯನಿಕ ಪರೀಕ್ಷೆಗಾಗಿ ಸ್ಯಾಂಪಲ್ ಗಾಗಿ ತೆಗೆದುಕೊಂಡಿರುತ್ತೇವೆ, ಸದ್ರಿ ಪಂಚನಾಮೆಯನ್ನು ನಾನೇ ಬರೆದಿರುತ್ತೇನೆ . ಆರೋಪಿ ಮನೆಯಲ್ಲಿ ಹುಡುಕಾಡಿದಾಗ ಆರೋಪಿಯ ಆಧಾರ ಕಾರ್ಡ ಜೆರಾಕ್ಸ ಪ್ರತಿ ಸಿಕ್ಕಿರುತ್ತದೆ . ಅದನ್ನು ನಾವು ಚಾಸಾ -1 ರ ಸುಪರ್ದಿಗೆ ಕೊಟ್ಟಿರುತ್ತೇನೆ .

3. ದಿಃ30-5-2024 ರಂದು ನನ್ನನ್ನು ಚಾಸಾ 1 ರವರು ಕರೆದು ರಾಸಾಯನಿಕ ಪರೀಕ್ಷೆಗೆ ಮುದ್ದೆ ಮಾಲುಗಳನ್ನು ತೆಗೆದುಕೊಂಡು ಹೋಗಬೇಕು ಎಂದು ಹೇಳಿದ ಕಾರಣ ನಾನು ಸದ್ರಿ ಮುದ್ದೆಮಾಲುಗಳನ್ನು ರಾಸಾಯನಿಕ ಪರಿಕ್ಷೆಗಾಗಿ ಮತ್ತು ಕೋರಿಕೆ ಪತ್ರ ವನ್ನು ಪಡೆದುಕೊಂಡು ವಿಧಿವಿಜ್ಞಾನ ಇಲಾಖೆ, ಧಾರವಾಡಗೆ ಹೋಗಿ ಕೊಟ್ಟಿರುತ್ತೇನೆ . ಆಗ ಅವರು ವರದಿ ತಯಾರಾದ ಮೇಲೆ ತಿಳಿಸುತ್ತೇನೆ ಎಂದು ಹೇಳಿದ ಕಾರಣ ನಾನು ವಾಪಸ್ತು ಬಂದಿರುತ್ತೇನೆ .ದಿಃ26-6-2024 ರಂದು ಅವರು ನನಗೆ ಫೋನ ಕರೆ ಮಾಡಿ ಸದ್ರಿ

ರಾಸಾಯನಿಕ ಪರೀಕ್ಷೆ ವರದಿ ಪಡೆದು ಕೊಂಡು ಹೋಗಬೇಕು ಎಂದು ಹೇಳಿದ ಕಾರಣ ನಾನು ವರದಿ ಮತ್ತು ಮುದ್ದೆ ಮಾಲು ಪಡೆದು ಕೊಂಡು ತನಿಖಾಧಿಗೆ ಒಪ್ಪಿಸಿರುತ್ತೇನೆ . ಈ ಬಗ್ಗೆ ನಾನು ತನಿಖಾಧಿಕಾರಿಗೆ ಹೇಳಿಕೆ ನೀಡಿರುತ್ತೇನೆ . ಸಾಕ್ಷಿಗೆ ಈಗಾಗಲೆ ಗುರುತಿಸಲಾಗಿರುವ ನಿಪಿ–2 ನ್ನು ತೋರಿಸಲಾಗಿದ್ದು ಸಾಕ್ಷಿ ಅದನ್ನು ನೋಡಿ ಗುರುತಿಸಿರುವುರಿಂದ ನಿಪಿ–2 (ಬಿ) ಎಂದು , ಸಾಕ್ಷಿಗೆ ನಿಪಿ–3 ನ್ನು ತೋರಿಸಲಾಗಿದ್ದು ಸಾಕ್ಷಿ ಅದರಲ್ಲಿ ರುವ ಸಹಿ ನೋಡಿ ಗುರುತಿಸಿರುವುದರಿಂದ ನಿಪಿ–3(ಬಿ) ಎಂದು ಗುರುತಿಸಲಾಯಿತು . ಸಾಕ್ಷಿ ನ್ಯಾಯಾಲಯದ ಮುಂದೆ ಇರುವ ಮು.ಮಾ –1 ನ್ನು ನೋಡಿ ಗುರುತಿಸಿರುತ್ತಾರೆ .ಸಾಕ್ಷಿ ಮು.ಮಾ–1 ರ ಮೇಲಿರುವ ತನ್ನ ಸಹಿ ನೋಡಿ ಗುರುತಿಸಿರುವುದರಿಂದ ಮು.ಮಾ –1 (ಬಿ) ಎಂದು ಗುರಾುತಿಸಲಾಯಿತು .

4. ಆ ದಿನ ಬೆಳಗಿನ ಜಾವ ಅಗಿದ್ದು ಕತ್ತಲಾದ ಕಾರಣ ಓಡಿ ಹೋದ ವ್ಯಕ್ತಿಯ ಮುಖ ಕಂಡಿರಲಿಲ್ಲ . ಅದರೆ ನಂತರದಲ್ಲಿ ಈ ನ್ಯಾಯಾಲಯದ ಮುಂದೆ ನಿಂತಿರುವ ವ್ಯಕ್ತಿಯು ಮಾನ್ಯ ಜಿಲ್ಲಾ ನ್ಯಾಯಾಲಯದಿಂದ ನಿರೀಕ್ಷಣಾ ಜಾಮಿನು ಪಡೆದು ನಮ್ಮ ಕಚೇರಿಗೆ ಹಾಜರಾಗಿರುವುದರಿಂದ ಮಾನ್ಯ ನ್ಯಾಯಾಲಯದ ಅದೇಶ ಪಾಲಿಸಿರುತ್ತೇನೆ ಮತ್ತು ನ್ಯಾಯಾಲಯದ ಮುಂದೆ ನಿಂತಿರುವ ಅರೋಪಿಯು ಆ ದಿನ ನಮ್ಮ ಕಚೇರಿಗೆ ಹಾಜರಾಗಿ ನೀರಿಕ್ಷಣಾ ಜಾಮೀನು ಹಾಜರು ಪಡಿಸಿದ ವ್ಯಕ್ತಿ ಆಗಿರುತ್ತಾನೆ . ನ್ಯಾಯಾಲಯದ ಮುಂದೆ ನಿಂತಿರುವ ಅರೊಪಿಯನ್ನು ಸಾಕ್ಷಿ ನೋಡಿ ಗುರುತಿಸಿರುತ್ತಾರೆ .ಈ ಪ್ರಕಣದಲ್ಲಿ ರುವ ತನಿಖಾಧಿಕಾರಿಯಾದ ಚಾಸಾ –5 ರವರು ಮ್ರತ ಪಟ್ಟಿರುವುದರಿಂದ ಮತ್ತು ಷದ್ರಿ ರಾಸಾಯನಿಕ ಪರಿಕ್ಷಾ ವರದಿಯನ್ನು ಷದ್ರಿ ಸಾಕ್ಷಿದಾರರರು ಸ್ವಿಕರಿಸಿರುವುದರಿಂದ ರಾಸಾಯನಿಕ ಪರಿಕ್ಷಾ ವರದಿಯನ್ನು ನಿಶಾನೆಗೆ ಒಳಪಡಿಸಲು ಅದನ್ನು ನಿಪಿ–5 ಎಂದು ಗುರುತಿಸಲಾಯಿತು .

**<u>ಪಾಟೀ ಸವಾಲುಃ</u> ಆರೋಪಿ ಪರ ಶ್ರೀ ಡಿ.ಎನ್ .ಎನ್ ವಕೀಲರಿಂದಃ**

5. ಚಾಸಾ–1 ಮತ್ತು 5 ರವರು ನನ್ನ ಮೇಲಾಧಿಕಾರಿ ಎಂದರೆ ಸರಿ . ಸಾಮಾನ್ಯವಾಗಿ ಮೇಲಾಧಿಕಾರಿ ಹೇಳಿದಂತೆ ನಾವು ಕೇಳುತ್ತೇವೆ ಎಂದರೆ ಸರಿ ಚಾಸಾ–1 ರವರಿಗೆ ಬಾತ್ಮಿ ಬಂತು ಎಂದು ಹೇಳಲಾದ ಸಮಯದಲ್ಲಿ ನಾವೆಲ್ಲರೂ ಇಲಾಖಾ ಜೀಪ ನಲ್ಲಿ ಇದ್ದೆವು. ಬಾತ್ಮಿ ಬಂತು ಎಂದು ಹೇಳಲಾದ ಸಮಯದಲ್ಲಿ ನಮ್ಮ ಇಲಾಖಾ ಜೀಪ ರಾಮನಗುಳಿ ಯಲ್ಲಿ ಇತ್ತು. ಅಂಕೋಲಾದಿಂದ ರಾಮನಗುಳಿ 40 ಕಿ ಮೀಟರ

ದೂರ ವಾಗುತ್ತದೆ . ನೀವು ಆ ದಿನ ಗಸ್ತು ಕರ್ತವ್ಯದಲ್ಲಿ ಇದ್ದ ಬಗ್ಗೆ ಠಾಣಾ ರಜಿಸ್ಟರದಲ್ಲಿ ನಮೂದು ಆಗಿರುತ್ತದೆ ಎಂದರೆ ಸರಿ . ಅದು ಠಾಣಾ ವಹಿಯಲ್ಲಿ ನಮೂದು ಆಗುತ್ತದೆ . ನೀವು ಆ ದಿನ ಗಸ್ತು ಕರ್ತವ್ಯದಲ್ಲಿ ಇದ್ದ ಬಗ್ಗೆ ಠಾಣಾ ವಹಿಯನ್ನು ತನಿಖಾಧಿಕಾರಿಗೆ ಕೊಟ್ಟಿರುತ್ತಿರಾ ಎಂದರೆ ಇಲ್ಲ . ಆ ದಿನ ನಾನು ಚಾಸಾ 1 ಹಾಗೂ 3 ಹಾಗೂ ಚಾಲಕನಾದ ವಿನಾಯಕ ನಾಯ್ಕ ರವರು ಗಸ್ತು ಕರ್ತವ್ಯದಲ್ಲಿ ಇದ್ದೆವು . ಆ ದಿನ ಚಾಲಕನಾದ ವಿನಾಯಕ ನಾಯ್ಕ ಚಾಲಕನಾಗಿ ನಮ್ಮೊಂದಿಗೆ ಇದ್ದರು ಎಂದು ಪಂಚನಾಮೆಯಲ್ಲಾಗಲಿ ಅಥವಾ ನೀಡಲಾದ ಹೇಳಿಕೆಯಲ್ಲಾಗಲಿ ಇಲ್ಲ ಎಂದರೆ ಸರಿ . ಹಳವಳ್ಳಿ ಎಂಬ ಜನ ವಸತಿ ಇರುವ ಪ್ರದೇಶ ಎಂದರೆ ಸರಿ . ಆ ದಿನ ನಾವು ಸ್ವತಂತ್ರ ಸಾಕ್ಷಿದಾರರನ್ನು ಕಲೆ ಹಾಕುವ ಪ್ರಯತ್ನ ಮಾಡಿರುತ್ತಿರಾ ಎಂದರೆ ನಾನು ಆ ಪ್ರಯತ್ನ ಮಾಡಿದ್ದೆವು ಆದರೆ ಬೆಳಗಿನ ಜಾವ ಆಗಿದ್ದರಿಂದ ಸಾಕ್ಷಿದಾರರು ಸಿಗಲಿಲ್ಲ . ಆ ದಿನ ನಾವು 2-3 ಜನರಿಗೆ ಸಾಕ್ಷಿದಾರರಾಗಿ ಬರಲು ಕೇಳಿದ್ದೆವು ಅವರು ಬರಲಿಲ್ಲ . ಸುಮಾರು 5-00- 5-15 ಗಂಟೆಗೆ ಕೇಳಿದ್ದೆವು .5-30 ಪಂಚನಾಮೆ ಬರೆಯಲು ಪ್ರಾರಂಭಿಸಿದೆವು . ಆ ದಿನ 2-3 ಜನರಿಗೆ ಹೇಳಿದೆವು ಅವರನ್ನು 10-15 ನಿಮಿಷದ ವರೆಗೆ ವಿಚಾರಿಸಿದೆವು ಎಂದು ಪಂಚನಾಮೆಯಲ್ಲಾಗಲಿ ಅಥವಾ ನಿಮ್ಮ ಹೇಳಿಕೆಯಲ್ಲಾಗಲಿ ಬರೆದಿರುವುದಿಲ್ಲ ಎಂದರೆ ಸರಿ .ಘಟನಾ ಸ್ಥಳಕ್ಕೆ 5-00 ಗಂಟೆಗೆ ತಲುಪಿದೆವು . ಆರೋಪಿ ಯಾವ ದಿಕ್ಕಿಗೆ ಓಡಿ ಹೋದ ಎಂದರೆ ಅರೋಪಿ ಮನೆಯ ಎಡಬದಿಗೆ ಓಡಿ ಹೋಗಿರುತ್ತಾನೆ . ಆರೋಪಿಯು 100 ಮೀಟರ ವರೆಗೆ ಓಡಿ ಹೋಗಿರುತ್ತಾನೆ ಚಾಸಾ -1 ಹಾಗೂ ಚಾಸಾ-3 ರವರು ಅವರನ್ನು 10 ರಿಂದ 15 ನಿಮಿಷದ ವರೆಗೆ ಹುಡುಕಾಡಿರುತ್ತಾನೆ . ಈ ವಿಷಯವನ್ನು ಪಂಚನಾಮೆ ಯಲ್ಲಿ ಮತ್ತು ಹೇಳಿಕೆಯಲ್ಲಿ ಬರೆದಿಲ್ಲ ಎಂದರೆ ಸರಿ . ಆರೋಪಿ ಆ ದಿನ ಹಾಕಿದ ಬಟ್ಟೆಯ ಬಣ್ಣವನ್ನು ಪಂಚನಾಮೆಯಲ್ಲಿ ಬರೆದಿಲ್ಲ ಎಂದರesಸರಿ . ಆ ದಿನ ಕತ್ತಲಾಗಿತ್ತು .

6. ಮನೆಯಲ್ಲಿ ಎಷ್ಟು ಕೊಣೆಗಳು ಇತ್ತು ಎಂದರೆ ನಾನು ನೋಡಿಲ್ಲ . ಮೊದಲಿನ ಕೋಣೆಯಲ್ಲಿ ಮುದ್ದೆ ಮಾಲು ಸಿಕ್ಕಿರುವುದರಿಂದ ಮುಂದೆ ಹುಡುಕಾಡಿಲ್ಲ . ನಾವು ದಾಳಿಗೆ ಹೋದೆವು ಎಂದು ಹೇಳಲಾದ ಸಮಯದಲ್ಲಿ ಮೊದಲಿಗೆ ಪಂಚನಾಮೆ ಬರೆಯುವುದಿಲ್ಲ ಎಲಾಲ ವಿಚಾರಣೆ ಮಾಡಿ ನಂತರ ದಲ್ಲಿ ಪಂಚನಾಮೆ ಬರೆಯಲಾಗುತ್ತದೆ ಎಂದರೆ ಸರಿ . ಲೋಕ ಸಭಾ ಚುನಾವಣೆ ನಿಮಿತ್ತ ನಿಮ್ಮ

ಮೇಲಾಧಿಕಾರಿಗಳಿಂದ ಪ್ರಸಂಶೆ ಪಡೆದು ಕೊಳ್ಳಲು ಮತ್ತು ಪ್ರಮೋಷನ ಗಿಟ್ಟಿಸಿಕೊಳ್ಳಲು ಅಂಕಿ ಅಂಶಕೋಸ್ಕರ ಈ ಸುಳ್ಳು ಪ್ರಕರಣ ಮಾಡಿದ್ದು ಎಂದರೆ ಸರಿಯಲ್ಲ . ನ್ಯಾಯಾಲಯದ ಮುಂದೆ ಇರುವ ಮುಮಾ-1 ಖಾಲಿ ಟೆಟ್ರಾ ಪ್ಯಾಕ ಎಂದರೆ ಸರಿ . ಸದ್ರಿ ಖಾಲಿ ಟೆಟಾ ಪ್ಯಾಕ ಗಳು ಯಾವುದೆ ಬಾರ ಅಂಗಡಿಗಳಲ್ಲಿ ಸಿಗುತ್ತದೆ ಎಂದರೆ ಸರಿ . ನೀವು ಹೇಳಿದಂತೆ ವಿನಾಯಕ ನಾಯಕ ಎಂಬ ಚಾಲಕನನ್ನು ಈ ಪ್ರಕರಣದಲ್ಲಿ ಸಾಕ್ಷಿದಾರರನ್ನಾಗಿ ಸೇರಿಸಿಲ್ಲ ಮತ್ತು ಆತನ ಸಹಿಯನ್ನು ಪಂಚನಾಮೆಯಲ್ಲಿ ಪಡೆದು ಕೊಂಡಿಲ್ಲ ಎಂದರೆ ಆತನು ಗುತ್ತಿಗೆ ಆಧಾರದಲ್ಲಿ ನಮ್ಮ ಇಲಾಖೆಯಲ್ಲಿ ಕೆಲಸ ಮಾಡುತ್ತಿರುವುರಿಂದ ಆತನನ್ನು ಈ ಪ್ರಕರಣ ದಲ್ಲಿ ಸಾಕ್ಷಿ ದಾರರನ್ನಾಗಿ ಮಾಡಿಲ್ಲ . ಅದೇ ರೀತಿ ಆರೋಪಿಯ ಮನೆಯ ಸುತ್ತ ಅರಣ್ಯ ಪ್ರದೇಶ ಇರುತ್ತದೆ ಎಂದು ತೋರಿಸಲು ಯಾವುದೆ ದಾಖಲಾತಿ ನ್ಯಾಯಾಲಯದ ಮುಂದೆ ಇಲ್ಲ ಎಂದರೆ ಸರಿ . ದಿಃ21-3-2024 ರಂದು ಲೊಕ ಸಭಾ ಚುನಾವಣಾ ನಿಮಿತ್ತ ನಿಮ್ಮ ಇಲಾಖಾ ವಾಹನದಲ್ಲಿ ಅಂಕೋಲಾದಲ್ಲಿ ಗಸ್ತು ತಿರುಗಿದ್ದು ಇಲ್ಲ ಎಂದರೆ ಸರಿಯಲ್ಲ . ನೀವು ಹೇಳಿದಂತೆ ಆ ಸಮಯದಲ್ಲಿ ಬಾತ್ಮಿ ದಾರರಿಂದ ಯಾವುದೆ ಬಾತ್ಮಿ ಬಂದಿಲ್ಲ ಎಂದರೆ ಸರಿಯಲ್ಲ . ನೀವು ಆ ದಿನ ಘಟನಾ ಸ್ಥಳಕ್ಕೆ ಹೋದದ್ದು ಇಲ್ಲ ಮತ್ತು ಅರೋಪಿ ಮನೆಯಿಂದ ಯಾವುದೆ ವಸ್ತುಗಳನ್ನು ಅಮಾನುತ್ತು ಪಡಿಸಿಕೊಂಡಿದ್ದು ಇಲ್ಲ. ಪಂನಚನಾಮೆ ಮಾಡಿದ್ದು ಇಲ್ಲ . ಶೊಧನಾ ಸಮುಚಿತ ವಾರಂಟನ್ನು ಹೊರಡಿಸಿದ್ದು ಇಲ್ಲ . ಎಂದರೆ ಸರಿಯಲ್ಲ . ಆರೋಪಿಯ ಆಧಾರ ಕಾರ್ಡ ಸಿಕ್ಕಿದ್ದೆ ಇಲ್ಲ ಎಂದರೆ ಸರಿಯಲ್ಲ . ಚಾಸಾ -3 ರವರು ಸದ್ರಿ ಹಳವಳ್ಳಿ ಯ ಬಿಟ್ ಅಬಕಾರಿ ಪೋಲಿಸರು ಎಂದು ತೋರಿಸಲು ಯಾವುದೆ ದಾಖಲಾತಿ ನ್ಯಾಯಾಲಯಕ್ಕೆ ಹಾಜರ ಪಡಿಸಿಲ್ಲ ಎಂದರೆ ಸರಿಯಲ್ಲ . ಬೆವಾರಸುದಾರ ವಸ್ತುಗಳನ್ನು ಠಾಣೆಯಲ್ಲಿ ಹಾಜರ ಪಡಿಸಿಕೊಂಡು ಈ ಪ್ರಕರಣ ಸೃಷ್ಟಿ ಮಾಡಿರುತ್ತಿರಿ ಎಂದರೆ ಸರಿಯಲ್ಲ . ನ್ಯಾಯಾಲಯದ ಮುಂದೆ ಇರುವ ಆರೋಪಿಗೂ ಮುದ್ದೆಮಾಲಿಗೂ ಯಾವುದೆ ಸಂಬಂದ ಇಲ್ಲ ಎಂದರೆ ಸರಿಯಲ್ಲ . ಪ್ರಕರಣಕ್ಕೆ ಅನೂಕುಲವಾಗುವ ರೀತಿಯಲ್ಲಿ ಮತ್ತು ಅಂಕಿ ಅಂಶಕೋಸ್ಕರ ಈ ಪ್ರಕರಣ ವನ್ನು ಸೃಷ್ಟಿ ಮಾಡಿರುತ್ತಿರಿ ಎಂದರೆ ಸರಿಯಲ್ಲ . ಮುಖ್ಯ ವಿಚಾರಣೆಯಲ್ಲಿ ಹೇಳಿದ ಎಲ್ಲಾ ವಿಚಾರಗಳು ಸುಳ್ಳಿನಿಂದ ಕೂಡಿರುತ್ತದೆ ಎಂದರೆ ಸರಿಯಲ್ಲ . ನಾನು ರಾಸಾಯನಿಕ ಪರಿಕ್ಷಾ ವರದಿಗಾಗಿ ನಾನು ಮುದ್ದೆ ಮಾಲುಗಳನ್ನು ವಿಧಿ ವಿಜ್ಞಾನ ಇಲಾಖೆ ಗೆ ಹಾಜರ ಪಡಿಸಿದ್ದು ಇಲ್ಲ ಮತ್ತು ವರದಿ ಸ್ವಿಕರಿಸಿದ್ದು ಇಲ್ಲ ಎಂದರೆ ಸರಿಯಲ್ಲ .

ಮೇಲಾಧಿಕಾರಿಗಳ ಮಾತನ್ನು ಕೇಳಿ ಅವರಿಗೆ ಅನೂಕೂಲವಾಗುವಂತೆ ಠಾಣೆಯಲ್ಲಿ ಸೃಷ್ಟಿಸಿದ ಪ್ರಕರಣಕ್ಕೆ ಅವರ ಪರವಾಗಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ .

**ಮರು ವಿಚಾರಣೆಃ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೆ ಸರಿ ಇದೆ.

ಹಿರಿಯ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.,
ಅಂಕೋಲಾ.